# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.264-2018** **ಡಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ರಾಜು<br>ಹೊಸಕೋಟೆ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ 27-03-2025.** |

**ಪಾಟೀ ಸವಾಲುಃ ವಾದಿಗಳ ಪರ ಶ್ರೀ ಕುಮಾರ್ ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಚಾಮುಂಡನಾಯಕ ನನ್ನ ತಾತ. ನನ್ನ ತಾತಾ ಚಾಮುಂಡನಾಯಕ ರವರ ತಂದೆ ಹೆಸರು ಚಾಮನಾಯಕ ಉರುಫ್ ಕುಳ್ಳನಾಯಕ ಆಗಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತು ಚಾಮುಂಡನಾಯಕ ರವರಿಗೆ ಪಿತ್ರಾರ್ಜಿತವಾಗಿ ಬಂದ ಸ್ವತ್ತಾಗಿರುತ್ತದೆ ಎಂದರೆ ಸರಿ. ನಾನು ಮತ್ತು ವಾದಿಗಳು ಚಾಮುಂಡನಾಯಕ ರವರ ವಾಸರುದಾರರು ಎಂದರೆ ಸರಿಯಲ್ಲ. ಚಾಮುಂಡನಾಯಕ ರವರಿಗೆ ಇಬ್ಬರು ಪತ್ನಿಯರು ಎಂದರೆ ಸರಿಯಲ್ಲ. ನನ್ನ ತಾತ ಚಾಮುಂಡನಾಯಕ ರವರಿಗೆ ರಂಗಮ್ಮ ಮತ್ತು ಪುಟ್ಟತಾಯಮ್ಮ ಎಂಬ ಇಬ್ಬರು ಹೆಂಡತಿಯರು ಇದ್ದರೂ ಸಹ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಮುಂಡನಾಯಕ ರವರಿಗೆ ಇಬ್ಬರು

ಪತ್ನಿಯರು ಎಂದು ಒಪ್ಪಿಕೊಂಡರೆ ವಾದಿಗಳಿಗೂ ಭಾಗಾಂಶ ನೀಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ನನ್ನ ತಾತ ಚಾಮುಂಡನಾಯಕ ರವರು ಪುಟ್ಟತಾಯಮ್ಮ ರವರ ಜೊತೆಯಲ್ಲಿ ಆಲತ್ತೂರು ಗ್ರಾಮದಲ್ಲಿ ವಾಸವಿದ್ದರೂ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾತ ಚಾಮುಂಡನಾಯಕ ರವರು ಹೊಸಕೋಟೆ ಗ್ರಾಮದಲ್ಲಿ ವಾಸವಿದ್ದರೂ ಎಂದು ನುಡಿಯುತ್ತಾರೆ. ನನ್ನ ತಾತ ಚಾಮುಂಡನಾಯಕ ರವರು ಹೊಸಕೋಟೆ ಗ್ರಾಮದಲ್ಲಿಯೇ ವಾಸವಿದ್ದರೂ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಾತ ಚಾಮುಂಡನಾಯಕ ರವರು ಹೊಸಕೋಟೆಯಲ್ಲಿಯೇ ವಾಸವಿದ್ದರೂ ಎಂದು ತೋರಿಸಲು ನಾನು ಮತದಾರರ ಗುರುತಿನ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ಗ್ರಾಮವು ಟಿ.ನರಸೀಪುರ ವಿಧಾನ ಸಭಾ ಚುನಾವಣಾ ವ್ಯಾಪ್ತಿಗೆ ಒಳಪಟ್ಟಿದ್ದು, ಈಗ ಹಾಲಿ ವರುಣಾ ವಿಧಾನ ಸಭಾ ಚುನಾವಣಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ.

3. ನನ್ನ ತಾತ ಚಾಮುಂಡನಾಯಕ ರವರು 1995 ರಲ್ಲಿ ಮರಣ ಹೊಂದಿರುತ್ತಾರೆ. ಸಾಕ್ಷಿಗೆ ಹೊಸಕೋಟೆ ಗ್ರಾಮದ 1993 ರ ಕರ್ನಾಟಕ ವಿಧಾನ ಸಭಾ ಮತದಾರರ ಪಟ್ಟಿ ಮತಗಟ್ಟೆ 89 ಅನ್ನು ತೋರಿಸಿ, ಸದರಿ ಮತದಾರರ ಪಟ್ಟಿಯಲ್ಲಿ ನಿಮ್ಮ ಕುಟುಂಬಕ್ಕೆ ಸೇರಿದ್ದಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು

ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿಪಿ–11 ಎಂದು ಗುರುತಿಸಲಾಯಿತು. ಸದರಿ ಪಟ್ಟಿಯಲ್ಲಿ ಚಾಮುಂಡನಾಯಕ ರವರ ಹೆಸರು ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಗೆ 1980 ಕರ್ನಾಟಕ ರಾಜ್ಯ ವಿಧಾನ ಸಭಾ ಮತದಾರರ ಪಟ್ಟಿ ಪೋಲಿಂಗ್ ಸ್ಟೇಷನ್ ನಂ.67 ಅನ್ನು ತೋರಿಸಿ ಸದರಿ ಮತದಾರರ ಪಟ್ಟಿಯೂ ನಿಮ್ಮ ಕುಟುಂಬಕ್ಕೆ ಸೇರಿದ್ದಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು ಸದರಿ ದಾಖಲೆಯನ್ನು ನಿಪಿ–12 ಎಂದು ಗುರುತಿಸಲಾಯಿತು. ಸದರಿ ಪಟ್ಟಿಯಲ್ಲಿಯೂ ಸಹ ಚಾಮುಂಡನಾಯಕ ರವರ ಹೆಸರು ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿಗೆ ಅಲತ್ತೂರು ಗ್ರಾಮದ 1993 ಮತ್ತು 1980 ರ ಕರ್ನಾಟಕ ವಿಧಾನ ಸಭಾ ಮತದಾರರ ಪಟ್ಟಿಯನ್ನು ತೋರಿಸಿ ಸದರಿ ಪಟ್ಟಿಯಲ್ಲಿ ಪುಟ್ಟತಾಯಮ್ಮ ಕೋಂ ಚಾಮುಂಡನಾಯಕ, ರಾಜನಾಯಕ ಬಿನ್ ಚಾಮುಂಡನಾಯಕ ಎಂದು ಹಾಗೂ ಪುಟ್ಟತಾಯಮ್ಮ ಕೋಂ ಚಾಮುಂಡನಾಯಕ, ಚಾಮುಂಡನಾಯಕ ಬಿನ್ ಕುಳ್ಳನಾಯಕ ಎಂದು ನಮೂದು ಇರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಹೌದು ಒಪ್ಪಿಕೊಂಡಿದ್ದು, ಸದರಿ ದಾಖಲೆಗಳನ್ನು ನಿಪಿ–13 ಮತ್ತು 14 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ಸದರಿ ದಾಖಲೆಗಳಲ್ಲಿ ನಮೂದಾಗಿರುವ ಚಾಮುಂಡನಾಯಕ ಬೇರೆ ಇರಬಹುದು ಎಂದು

ನುಡಿಯುತ್ತಾರೆ. ಚಾಮುಂಡನಾಯಕ ರವರು ಎಂದೂ ಹೊಸಕೋಟೆಯಲ್ಲಿ ವಾಸವಿಲ್ಲದೇ ಇದ್ದ ಕಾರಣ ಅವರ ಹೆಸರು ಮತದಾರರ ಪಟ್ಟಿಯಲ್ಲಿ ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ.

4. ಇದೇ ನ್ಯಾಯಾಲಯದಲ್ಲಿ ಓ.ಎಸ್.ನಂ.439/2012 ರಂತೆ ಸರ್ಕಾರ ಮತ್ತು ಇತರರ ವಿರುದ್ಧ ದಾವೆ ಸಲ್ಲಿಸಿದ್ದೆನು ಎಂದರೆ ಸರಿ. ಸದರಿ ದಾವೆಯನ್ನು ದಾಖಲು ಮಾಡಿದ ಸಮಯ ಚಾಮುಂಡನಾಯಕ ರವರ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಸದರಿ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯದ ಮುಖೇನ ಪಡೆದುಕೊಂಡಿರುತ್ತೇನೆ.

5. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ತಾತ ಚಾಮುಂಡನಾಯಕ ರವರು 1987 ರಲ್ಲಿ ಮರಣ ಹೊಂದಿರುತ್ತಾರೆ ಎಂದು ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಚಾಮುಂಡನಾಯಕ ರವರು ಮರಣ ದಿನಾಂಕವನ್ನು 02-02-1987 ಎಂದು ಮತ್ತು ಅವರ ಮರಣ ಹೊಂದಿದ ಸ್ಥಳವನ್ನು ಆಲತ್ತೂರು ಎಂದು ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ವಾಸ್ತವವಾಗಿ ಚಾಮುಂಡನಾಯಕ ರವರು ಆಲತ್ತೂರಿನಲ್ಲಿ ಮರಣ ಹೊಂದಿದ್ದರಿಂದ, ಸಂಬಂಧಪಟ್ಟ ಪಂಚಾಯ್ತಿಯವರು ಅವರ

ಮರಣವನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳಿ, ನ್ಯಾಯಾಲಯದಿಂದ ನನ್ನ ತಾತನವರ ಮರಣ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಾತನವರು ವಾಸ್ತವವಾಗಿ 1995 ರವರೆಗೆ ಜೀವಂತವಾಗಿದ್ದ ಪಕ್ಷದಲ್ಲಿ ಅವರ ಮರಣದ ಬಗ್ಗೆ ಸಂಬಂಧಪಟ್ಟ ಹೊಸಕೋಟೆ ಗ್ರಾಮ ಪಂಚಾಯ್ತಿಯಲ್ಲಿ ನಮೂದು ಆಗಿದ್ದು, ಆದರೆ ವಾಸ್ತವವಾಗಿ ಅವರು 1995 ವರೆಗೆ ಜೀವಂತವಾಗಿ ಇಲ್ಲದೇ ಇದ್ದ ಕಾರಣ ಅವರ ಹೆಸರು ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ. 1995 ರವರೆಗೆ ನನ್ನ ತಾತ ಚಾಮುಂಡನಾಯಕ ರವರು ಜೀವಂತವಾಗಿದ್ದರು ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಲು ಸಿದ್ಧರಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಈಗಾಗಲೇ ದಾಖಲೆಗಳನ್ನು ಹಾಜರುಪಡಿಸಿರುವುದರಿಂದ, ಯಾವುದೇ ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ನನ್ನ ತಾತ ಚಾಮುಂಡನಾಯಕ ರವರು 1995 ರವರೆಗೆ ಜೀವಂತ ಇದ್ದರು ಎಂದು ಸಾಭೀತಾ ಪಡಿಸಲು ನಮ್ಮ ಗ್ರಾಮದ ಹಿರಿಯರನ್ನು ಸಾಕ್ಷಿ ಮಾಡಿಸಲು ನಾನು ಸಿದ್ಧನಿರುತ್ತೇನೆ.

6. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನನ್ನ ತಾತ ಚಾಮುಂಡನಾಯಕ ರವರು ದಿ.03-12-2013 ರಂದು ಮರಣ ಹೊಂದಿದರು ಎಂದು ನಮೂದು ಇದ್ದು, ಮತ್ತೊಂದು ಕಡೆ 1987 ರಲ್ಲಿ ಮರಣ

ಹೊಂದಿದ್ದಾರೆ ಎಂದು ನಮೂದಿಸಿದ್ದು, ಆದರೆ ನನ್ನ ಹೇಳಿಕೆಯಲ್ಲಿ 1995 ರಲ್ಲಿ ಮರಣ ಹೊಂದಿರುತ್ತಾರೆ ಎಂದು ಹೇಳುತ್ತಿದ್ದು, ಈ ಮೂರು ಹೇಳಿಕೆಗಳಲ್ಲಿ ಯಾವ ಹೇಳಿಕೆ ಸರಿ ಎಂಬ ಪ್ರಶ್ನೆಗೆ ಸಾಕ್ಷಿ  ನನ್ನ ತಾತ ಚಾಮುಂಡನಾಯಕ ರವರು 1995 ರಲ್ಲಿ ಮರಣ ಹೊಂದಿರುತ್ತಾರೆ ಎಂದು ನುಡಿಯುತ್ತಾರೆ.

(ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಸಮಯಾವಕಾಶವನ್ನು ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**